ದಿನಾಂಕಃ **13.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿಯ ಪರ ಶ್ರೀ ಪಿ.ವಿ.ಪಿ. ವಕೀಲರಿಂದಃ

01. ನನ್ನ ತಂದೆ ಮಲ್ಕಿ ಒಡೆಯರ್ ಶಿವಪ್ಪ ದಿನಾಂಕ 06.08.1994 ರಂದು ಮೃತಪಟ್ಟಿದ್ದಾರೆ. ನನ್ನ ತಾಯಿ ಪಾರ್ವತಮ್ಮ 1999 ರಲ್ಲಿ ಮೃತಪಟ್ಟಿದ್ದಾರೆ, ನನಗೆ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ನನ್ನ ತಂದೆ-ತಾಯಿಗೆ ಒಟ್ಟು 6 ಜನ ಮಕ್ಕಳು ಎಂದರೆ ಸರಿ. ಸದರಿ 6 ಜನ ಮಕ್ಕಳೇ ಈ ದಾವೆಯ ವಾದಿ ಮತ್ತು 1 ರಿಂದ 5 ನೇ ಪ್ರತಿವಾದಿಗಳು ಎಂದರೆ ಸರಿ. ನನ್ನ ಅಣ್ಣ 2 ನೇ ಪ್ರತಿವಾದಿ ವೀರಣ್ಣ ಲೆಕ್ಚರರ್ ಆಗಿ ಉದ್ಯೋಗ ಮಾಡುತ್ತಿದ್ದರು ಎಂದರೆ ಸರಿ. ಅವರು ಹೊಸಪೇಟೆ ಮತ್ತು ಹರಪನಹಳ್ಳಿಯಲ್ಲಿ ಉದ್ಯೋಗ ಮಾಡಿ ಮರಣ ಹೊಂದಿದ್ದಾರೆ. ಅವರಿಗೆ ಈ ದಾವೆಯ ಸಮನ್ಸ್ ಜಾರಿಯಾದ 8 ದಿನಗಳ ನಂತರ ಮೃತಪಟ್ಟರು. ಅವರು ಉದ್ಯೋಗ ನಿಮಿತ್ತ ಬೇರೆ ಬೇರೆ ಊರುಗಳಲ್ಲಿ ನೆಲೆಸಿದ್ದು ಹೂವಿನಹಡಗಲಿಯಲ್ಲಿ ಅವರು ನೆಲೆಸಿರಲಿಲ್ಲ ಎಂದರೆ ಸರಿ. ನಾನು ಕರ್ನಾಟಕ ಗ್ರಾಮೀಣ ಬ್ಯಾಂಕಿನಲ್ಲಿ ಕ್ಲರ್ಕ್ ಮತ್ತು ಕ್ಯಾಶಿಯರ್ ಆಗಿ ಬಳ್ಳಾರಿ ಮತ್ತು ಈಗಿನ ವಿಜಯನಗರ ಜಿಲ್ಲೆಗಳ ಎಲ್ಲಾ ಊರುಗಳಲ್ಲೂ ಉದ್ಯೋಗ ಮಾಡಿದ್ದೆ. ಹಾಲಿ ನಾನು ಹಗರಬೊಮ್ಮನಹಳ್ಳಿಯಲ್ಲಿ ವಾಸ ಮಾಡುತ್ತೇನೆ ಎಂದರೆ ಸರಿ. ನಾನು ಹೂವಿನಹಡಗಲಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ವಾಸ ಮಾಡುವುದಿಲ್ಲ ಆದರೆ ಬಂದು-ಹೋಗುವುದು ಮಾಡುತ್ತಿದ್ದೇನೆ. ನನ್ನ ತಮ್ಮ 4 ನೇ ಪ್ರತಿವಾದಿ ಕೂಡಾ ಬ್ಯಾಂಕ್ ಉದ್ಯೋಗಿಯಾಗಿ ಬೇರೆ ಬೇರೆ ಊರುಗಳಲ್ಲಿ ಉದ್ಯೋಗ ಮಾಡಿದ್ದಾರೆ ಎಂದರೆ ಸರಿ. 4 ನೇ ಪ್ರತಿವಾದಿ ಕೂಡಾ ಈಗ ನಿವೃತ್ತರಾಗಿ ಹೂವಿನಹಡಗಲಿಯಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. 4 ನೇ ಪ್ರತಿವಾದಿ ನಿವೃತ್ತಿಯಾಗುವ ಮುಂಚೆಯೇ ಹೂವಿನಹಡಗಲಿಯಲ್ಲಿ ಮನೆ ಕಟ್ಟಿಸಿದ್ದರು, ಅವರು ಸುಮಾರು 15 ವರ್ಷಗಳಿಗಿಂತ ಹಿಂದಿನಿಂದಲೂ ಇಲ್ಲಿಯೇ ವಾಸ ಮಾಡುತ್ತಿದ್ದಾರೆ. ನನ್ನ ತಮ್ಮ 5 ನೇ ಪ್ರತಿವಾದಿ ನಾಗರಾಜ ಇವರು ಅಂಚೆ ಇಲಾಖೆ ಮತ್ತು ಹೋಮ್ ಗಾರ್ಡ್ ಎಂದು ತಾತ್ಕಾಲಿಕ ಉದ್ಯೋಗಗಳನ್ನು ಮಾಡುತ್ತಾರೆ.

02. ನನ್ನ ತಂಗಿ ವಾದಿಯನ್ನು ಬೂದನೂರು ಗ್ರಾಮಕ್ಕೆ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿ. ವಾದಿಯು ಮದುವೆಯಾದ ನಂತರದಿಂದ ಆಕೆಯ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದು, ತವರು ಮನೆಗೆ ಬಂದು-ಹೋಗುವುದು ಮಾಡುತ್ತಾರೆ ಎಂದರೆ ಹೌದು, ನಾನು ಹೇಳುತ್ತೇನೆ, ಸುಮಾರು 10-12 ವರ್ಷಗಳಿಂದ ವಾದಿ ಹೂವಿನಹಡಗಲಿಯಲ್ಲೇ ವಾಸ ಮಾಡುತ್ತಿದ್ದಾರೆ. ನನ್ನ ಅಕ್ಕ 1 ನೇ ಪ್ರತಿವಾದಿಯನ್ನು ಮತ್ತಿಹಳ್ಳಿಗೆ ಮದುವೆ ಮಾಡಿ ಕೊಟ್ಟಿದ್ದು ಆಕೆ ಹೂವಿನಹಡಗಲಿಯಲ್ಲೇ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಕೆಲವು ಆಸ್ತಿಗಳು ನನ್ನ ತಾತನಿಂದ ಬಂದಿರುತ್ತವೆ ಮತ್ತು ಇನ್ನೂ ಕೆಲವು ಆಸ್ತಿಗಳನ್ನು ನನ್ನ ತಂದೆ ಸಂಪಾದಿಸಿದ್ದಾರೆ. ನನ್ನ

ತಾತನಿಂದ ಬಂದ ಆಸ್ತಿಗಳು ಯಾವುವು? ಎಂದರೆ ಸಾಕ್ಷಿಯು 76 ಸಿ ಎಂದು ಹೇಳಿದ್ದು ಅದು ದಾವಾ ಐಟಂ ನಂ. 3 ಆಗಿರುತ್ತದೆ. 64 ಸೆಂಟ್ಸ್ ಆಸ್ತಿ ಕೂಡಾ ನನ್ನ ತಾತನ ಆಸ್ತಿ ಎಂದು ಹೇಳಿದ್ದು ಅದು ಐಟಂ ನಂ. 2 ಆಗಿರುತ್ತದೆ. ಐಟಂ ನಂ. 1 ಮತ್ತು 4 ನನ್ನ ತಂದೆ ಸಂಪಾದನೆ ಮಾಡಿದ ಆಸ್ತಿಗಳು ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿಗೆ ನಮ್ಮ ತಂದೆ-ತಾಯಿ ಜೀವಂತ ಇರುವಾಗಲೇ ಮದುವೆಗಳನ್ನು ಮಾಡಲಾಗಿತ್ತು ಎಂದರೆ ಸರಿ. ನಮ್ಮ ತಂದೆ-ತಾಯಿ ಬದುಕಿರುವವರೆಗೆ ದಾವಾ ಐಟಂ ನಂ. 1 ರಿಂದ 4 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ವಿಭಾಗ ಆಗಿರಲಿಲ್ಲ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ಇಸವಿ 2000 ಕ್ಕಿಂತ ಮುಂಚೆ ನಾವು ವಿಭಾಗ ಮಾಡಿಕೊಂಡಿದ್ದೇವೆ ಎಂದು ಬರೆಯಿಸಿದ್ದು, ಸದರಿ ವಿಭಾಗವನ್ನು ಯಾವ ದಿನಾಂಕ, ತಿಂಗಳು ಮತ್ತು ಇಸವಿಯಲ್ಲಿ ಮಾಡಿಕೊಂಡಿದ್ದೀರಿ? ಎಂದರೆ ನನಗೆ ದಿನಾಂಕ, ತಿಂಗಳು, ಇಸವಿ ನೆನಪಿಲ್ಲ ಆದರೆ ನನ್ನ ತಂದೆ ತೀರಿಕೊಂಡ ನಂತರ ಮಾಡಿಕೊಂಡಿದ್ದೇವೆ. ಸದರಿ ವಿಭಾಗದಲ್ಲಿ ಯಾರು ಯಾರು ಹಾಜರಿದ್ದರು? ಎಂದರೆ ನಾವೇ ಅಣ್ಣ-ತಮ್ಮಂದಿರು ಮತ್ತು ನಮ್ಮ ಚಿಕ್ಕಪ್ಪ ಇದ್ದರು. ಬೇರೆಯವರು ಯಾರೂ ಬೇಡವೆಂದು ನಾವೇ ಸೇರಿ ವಿಭಾಗ ಮಾಡಿಕೊಂಡಿದ್ದೆವು. ಸದರಿ ಪಾಲುವಿಭಾಗದ ಪ್ರಕಾರ ತಹಶೀಲ್ದಾರರಿಗೆ ಮತ್ತು ಪುರಸಭೆಗೆ ಅರ್ಜಿ ಕೊಟ್ಟು ವಿಭಾಗದ ಪ್ರಕಾರ ನಿಮ್ಮ ನಿಮ್ಮ ಹೆಸರುಗಳಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೀರಾ? ಎಂದರೆ ಮಾಡಿಸಿಕೊಂಡಿಲ್ಲ, ನಾವು ಯಾವುದೇ ಮೌಖಿಕ ಪಾಲುವಿಭಾಗ ಮಾಡಿಕೊಳ್ಳದೇ ಇದ್ದರೂ ಮಾಡಿಕೊಂಡಿದ್ದೇವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

03. ವಾದಿಯು ತನ್ನ ಪರವಾಗಿ ಗುರುತಿಸಿಕೊಂಡ ದಾಖಲೆಗಳನ್ನು ನಾನು ನೋಡಿದ್ದೇನೆ. ನಾನು, 2 ಮತ್ತು 5 ನೇ ಪ್ರತಿವಾದಿಗಳು ಐಟಂ ನಂ. 1 ನ್ನು ಹಕ್ಕು ಬದಲಾವಣೆ ಮಾಡಿಕೊಂಡ 2009 ನೇ ಇಸವಿಯಲ್ಲಿ ಅದರ ಖಾತೆ ನಮ್ಮ ತಂದೆಯ ಹೆಸರಿನಲ್ಲಿತ್ತು ಎಂದರೆ ಸರಿ. 4 ನೇ ಪ್ರತಿವಾದಿಯು ಐಟಂ ನಂ. 4 ನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳುವ ಮುಂಚೆ ಅದರ ಖಾತೆ ಕೂಡಾ ನಮ್ಮ ತಂದೆಯ ಹೆಸರಿನಲ್ಲಿತ್ತು ಎಂದರೆ ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಖಾತೆಯಾಗಿತ್ತು, ಅದಾದ ನಂತರ ನನ್ನ ಅಣ್ಣನ ಹೆಸರಿಗೆ ಖಾತೆಯಾಯಿತು. 2 ರಿಂದ 5 ನೇ ಪ್ರತಿವಾದಿಗಳಾದ ನಾವು ಹಕ್ಕು ಬದಲಾವಣೆಗೆ ದಿನಾಂಕ 13.12.2009 ರ ಪಾಲುವಿಭಾಗದ ಪ್ರಕಾರ ಖಾತೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟಿದ್ದೆವು ಎಂದರೆ ಸರಿ. 2009 ರ ಪಾಲುವಿಭಾಗ ರಿಜಿಸ್ಟರ್ ಪತ್ರವೇ ? ಎಂದರೆ ಅಲ್ಲ, ನಾವೇ ಅಣ್ಣ-ತಮ್ಮಂದಿರು ಸೇರಿ ಮಾಡಿಕೊಂಡಿದ್ದೆವು. ಸದರಿ ಪಾಲುವಿಭಾಗ ದಾಖಲೆಗೆ ವಾದಿ ಮತ್ತು 1 ನೇ ಪ್ರತಿವಾದಿಯನ್ನು ಸೇರಿಸಿರಲಿಲ್ಲ ಮತ್ತು ಅವರ ಸಹಿಗಳನ್ನು ಪಡೆದಿರಲಿಲ್ಲ ಎಂದರೆ ಸರಿ. ನಿಪಿ8 ರ ಪ್ರಕಾರ 2 ರಿಂದ 5 ನೇ ಪ್ರತಿವಾದಿಗಳು ದಿನಾಂಕ 14.03.2016 ರಂದು ಐಟಂ ನಂ. 2 ರ ಬಗ್ಗೆ ಒಂದು ಪಾಲುವಿಭಾಗ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ಪತ್ರದ ಪ್ರಕಾರ 2 ರಿಂದ 5 ನೇ ಪ್ರತಿವಾದಿಗಳು ಐಟಂ ನಂ. 2 ನ್ನು ತಲಾ 16 ಸೆಂಟ್ಸ್ ಬರುವಂತೆ ಹಂಚಿಕೆ

ಮಾಡಿಕೊಂಡಿದ್ದೇವೆ ಎಂದರೆ ಸರಿ. ನಿಪಿ8 ಕ್ಕೆ ಕೂಡಾ ವಾದಿಯ ಸಹಿ ಮತ್ತು ಸಮ್ಮತಿಯನ್ನು ಪಡೆದಿರಲಿಲ್ಲ ಎಂದರೆ ಸರಿ. ವಾದಿಯ ಹಿಸ್ಸೆಯನ್ನು ಆಕೆಗೆ ಕೊಡಬಾರದೆಂಬ ಉದ್ದೇಶದಿಂದ 2 ರಿಂದ 5 ನೇ ಪ್ರತಿವಾದಿಗಳು 2009 ರ ಮತ್ತು 2016 ರ ಪಾಲುವಿಭಾಗ ದಾಖಲೆಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಎರಡು ದಾಖಲೆಗಳು ವಾದಿಯ ಹಕ್ಕಿನ ಮೇಲೆ ಯಾವುದೇ ರೀತಿಯಲ್ಲಿ ಬಂಧಕವಾಗುವುದಿಲ್ಲ ಎಂದರೆ ಸರಿಯಲ್ಲ. ನಾವು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡ ಬಗ್ಗೆ ಗೊತ್ತಾದ ನಂತರ ವಾದಿಯು ನಮ್ಮ ಬಳಿಗೆ ಬಂದು ಆಕೆಯ ಹಿಸ್ಸೆಯನ್ನು ಕೇಳಿದ್ದರು ಎಂದರೆ ಸರಿಯಲ್ಲ. ನಾವು ವಾದಿಗೆ ಭಾಗ ಕೊಡಲು ನಿರಾಕರಿಸಿದ್ದರಿಂದ ಆಕೆ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿ ಕೂಡಾ ಪ್ರತಿವಾದಿಗಳ ಜೊತೆಯಲ್ಲಿ ದಾವಾ ಸ್ವತ್ತುಗಳಲ್ಲಿ ಜಂಟಿ ಸ್ವಾಧೀನ ಹೊಂದಿದ್ದರೂ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕುಟುಂಬದಲ್ಲಿ ಇಲ್ಲಿಯವರೆಗೆ ಪಾಲುವಿಭಾಗ ಆಗಿಲ್ಲವಾದ್ದರಿಂದ ನಮಗೆ ಎಷ್ಟು ಹಕ್ಕು ಇದೆಯೋ ವಾದಿಗೂ ಅಷ್ಟೇ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಕೊಡುವುದನ್ನು ತಪ್ಪಿಸಲು ನಾನೊಬ್ಬನೇ ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

ಮರು ವಿಚಾರಣೆಃ ಇರುವುದಿಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.